# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 240

**18 ಮಾರ್ಚ್ 2022 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಗಾಯನ**



ವಿದ್ವಾನ್ ಶ್ರೀರಾಮ್ ಶಾಸ್ತ್ರಿ



ವಿದ್ವಾನ್ ಕೇಶವ್ ಮೋಹನ್‌ಕುಮಾರ್
ವಯೊಲಿನ್



ವಿದ್ವಾನ್ ನಂದನ್ ಕಶ್ಯಪ್
ಮೃದಂಗ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಶ್ರೀರಾಮ್ ಶಾಸ್ತ್ರಿಯವರು** ಕರ್ನಾಟಕ ಸಂಗೀತದ ಉದಯೋನ್ಮುಖ ಕಲಾವಿದರಲ್ಲೊಬ್ಬರು. ಪದ್ಮಶ್ರೀ ವಿದ್ವಾನ್ ಆರ್.ಎನ್. ತ್ಯಾಗರಾಜರ ಶಿಷ್ಯರು. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಶಿಷ್ಯವೇತನ ಪಡೆದಿರುವ ಪ್ರತಿಭಾವಂತರು. ಕರ್ನಾಟಕದ ವಾಗ್ಗೇಯಕಾರರ ರಚನೆಗಳನ್ನಾಧರಿಸಿದ "ಕರ್ನಾಟಕ ವಾಗ್ಗೇಯ ಮಂಜರಿ", "ಜಗದಾನಂದಕಾರಕ" ಸಾಮೂಹಿಕ ಕಾರ್ಯಕ್ರಮ ಆಯೋಜನೆ; ಸಂಗೀತಕ್ಕೆ ಸಂಬಂಧಿಸಿದ ಲೇಖನಗಳ ಪ್ರಕಟಣೆ ಇವರ ವಿಶಿಷ್ಟ ಕೊಡುಗೆಗಳು.

ಶ್ರೀ ಶ್ರೀರಾಮ್ ಶಾಸ್ತ್ರಿಯವರು ಬಿಇ, ಎಂ.ಟೆಕ್., ಸಂಗೀತದಲ್ಲಿ ವಿದ್ವತ್ (ಪ್ರಥಮ ರ್‍ಯಾಂಕ್) ಮತ್ತು ಅಣ್ಣಾಮಲೈ ವಿಶ್ವವಿದ್ಯಾನಿಲಯದ ಮಾಸ್ಟರ್ ಆಫ್ ಫೈನ್ ಆರ್ಟ್ಸ್ (ವೋಕಲ್) ಪದವೀಧರರು.

ಕರ್ನಾಟಕದ ವಿವಿಧ ನಗರಗಳಲ್ಲಲ್ಲದೆ ಮುಂಬಯಿ, ಚೆನ್ನೈ, ಕೇರಳ, ತಿರುಪತಿ ಮುಂತಾದೆಡೆಗಳಲ್ಲಿನ ಪ್ರತಿಷ್ಠಿತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರಿಗೆ ಹಲವಾರು ಬಹುಮಾನಗಳು, ಪುರಸ್ಕಾರಗಳು ಲಭಿಸಿವೆ. ಕರ್ನಾಟಕ ಸರ್ಕಾರದ ಯುವಜನೋತ್ಸವ, ಬೆಂಗಳೂರಿನ ಗಾಯನಸಮಾಜ, ಮೈಸೂರಿನ ಗಾನಭಾರತೀ, ಶ್ರುತಿಮಂಜರಿ ಪ್ರತಿಷ್ಠಾನದ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ.

ಆಕಾಶವಾಣಿಯ ಬಿ-ಹೈ ಶ್ರೇಣಿ ಕಲಾವಿದರಾಗಿರುವ ಶ್ರೀ ಶ್ರೀರಾಮ್ ಶಾಸ್ತ್ರಿಯವರು ಬೆಂಗಳೂರಿನ ಸಂಗೀತ ಹಾಗೂ ಭಾರತೀಯ ಕಲೆಗಳ ಸಂಸ್ಥೆಯಾದ "ನಿಮಿತ್ತ"ದ ಸಂಸ್ಥಾಪಕ-ಅಧ್ಯಕ್ಷರು, ಕರ್ನಾಟಕ ಸಂಗೀತಗಾರರ ಮಹಾಮಂಡಳದ ಯುವ ಕಾರ್ಯಕಾರಿ ಸಮಿತಿ ಹಾಗೂ ಗಾನಕಲಾ ಪರಿಷತ್ತಿನ ಸದಸ್ಯರೂ ಆಗಿದ್ದಾರೆ.

**ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ರವರು** ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರ ಶಿಷ್ಯರು. ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ವಯೊಲಿನ್ ವಾದನದಲ್ಲಿ ಬಿ.ಹೈ ಶ್ರೇಣಿ ಕಲಾವಿದರು. ಪ್ರಧಾನ ಕಲಾವಿದರಾಗಿ ಹಾಗೂ ಸಾಥೀದಾರರಾಗಿ ಹಲವಾರು ಪ್ರತಿಷ್ಠಿತ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

**ವಿದ್ವಾನ್ ನಂದನ್ ಕಶ್ಯಪ್‌ರವರು** ವಿದ್ವಾನ್ ಡಾ. ಪತ್ರಿ ಸತೀಶ್‌ಕುಮಾರ್ ಮತ್ತು ವಿದ್ವಾನ್ ಶ್ರೀ ವಿ.ಎಸ್. ರಮೇಶ್‌ರವರ ಶಿಷ್ಯರಾಗಿದ್ದಾರೆ. ಬೆಂಗಳೂರಿನ ನಾದಮಯ ಫೌಂಡೇಶನ್ ಇವರಿಗೆ ಉತ್ತಮ ಮೃದಂಗ ವಾದನ ಪ್ರಶಸ್ತಿಗೆ ಬಹುಮಾನ ನೀಡಿದೆ. ಹಲವಾರು ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ. ಕಳೆದ ಏಳು ವರ್ಷಗಳಿಂದ ಸಾರ್ವಜನಿಕ ಕಾರ್ಯಕ್ರಮ ನೀಡುತ್ತಿದ್ದಾರೆ. ಹಲವಾರು ಜುಗಲಬಂದಿ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ತಮ್ಮ ಕಲಾಪರಿಣತಿಯನ್ನು ಪ್ರದರ್ಶಿಸಿದ್ದಾರೆ.

# ಬೆಳದಿಂಗಳ ಸಂಗೀತ 241

## 16 ಏಪ್ರಿಲ್ 2022



### ವೀಣಾ ವಾದನ

ವಿದುಷಿ ವೈ.ಜಿ. ಶ್ರೀಲತಾ

### ಮೃದಂಗ

ವಿದ್ವಾನ್ ಪುತ್ತೂರ್ ನಿಕ್ಷಿತ್





### ಘಟಂ

ವಿದ್ವಾನ್ ಶಮಿತ್ ಎಸ್. ಗೌಡ

ಫೋನ್: 0821–2548221, 2548223 * ಇಮೇಲ್: sutturmath@jssonline.org